ಪ್ರಧಾನ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ  ಧಾರವಾಡ

**ಸಿಸಿ ನಂ. 170/2025**

ಫಿರ್ಯಾದುದಾರರು:     ಸಂಚಾರ ಪೋಲಿಸಠಾಣೆ , ಧಾರವಾಡ

**-ವಿರುದ್ಧ-**

ಆರೋಪಿತನ ಹೆಸರು:  1) ಉದ್ದಪ್ಪ ಹೊನಕುಪ್ಪಿ
ಸಾ: ಸತ್ತಿಗೇರಿ , ತಾ: ಯರಗಟ್ಟಿ ,  ಜಿ: ಬೆಳಗಾವಿ

**ಆ ಪಾ ದ ನೆ**

ದಿನಾಂಕ 20.10.2024 ರಂದು ಬೆ: 4.40 ಗಂಟೆಯ ಸುಮಾರಿಗೆ ಧಾರವಾಡದ ಗೋವಾ ರಸ್ತೆಯಲ್ಲಿ ಸಂಪಿಗೆನಗರ ಬಸ್ ನಿಲ್ದಾಣದ ಹತ್ತಿರ 1 ನೇ ಆರೋಪಿತರಾದ ನೀವು ಚಲಾಯಿಸುತ್ತಿದ್ದ ಲಾರಿ ನಂ: ಜಿಎ-06/ಟಿ-9097 ನೇದ್ದನ್ನು ಜರ್ಮನ ಸರ್ಕಲ್ ಕಡೆಯಿಂದ ಕೇಲಗೇರಿ ಕಡೆಗೆ ಸಾರ್ವಜನಿಕ ರಸ್ತೆಯಲ್ಲಿ ಅತೀ ಜೋರಾಗಿ ಹಾಗೂ ನಿರ್ಲಕ್ಷತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಚಲಾಯಿಸಿಕೊಂಡು ಬಂದು ನಿಮ್ಮ ಎದುರಿನಿಂದ ಬರುತ್ತಿದ್ದ ಆಟೋ ರಿಕ್ಷಾ ನಂ: ಕೆಎ-25/ಡಿ-3725 ನೇದ್ದಕ್ಕೆ ಅಪಘಾಪಡಿಸಿ ಆ ಮೂಲಕ **ನಾಗರಿಕ ಸುರಕ್ಷಾ ಸಂಹಿತೆ ಕಲಂ 281** ರ ಪ್ರಕಾರ ಅಪರಾಧವೆಸಗಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ. ಇದಕ್ಕೆ ನೀವೇನು ಹೇಳುವಿರಿ ?

ಮೇಲೆ ಹೇಳಿದ ಸ್ಥಳ, ದಿನಾಂಕ ಹಾಗೂ ಸಮಯದಂದು 01 ನೇ ಆರೋಪಿತರಾದ ನೀವು ನಿಮ್ಮ ಲಾರಿ ಚಲಾಯಿಸಿಕೊಂಡು ಬಂದು ನಿಮ್ಮ ಎದುರಿನಿಂದ ಬರುತ್ತಿದ್ದ ಆಟೋ ರಿಕ್ಷಾಗೆ ಅಪಘಾತಪಡಿಸಿದ್ದು ಅಲ್ಲದೇ ಅದರಲ್ಲಿ ಪ್ರಯಾಣಿಸುತ್ತಿದ್ದ ಶ್ರೀಮತಿ ರೇಣುಕಾ ಕೋಂ ರವಿ ಹಂಚಿನಮನಿ ಇವರಿಗೆ ಸಾದಾ ಸ್ವರೂಪದ ಗಾಯಪಡಿಸಿ **ನಾಗರಿಕ ಸುರಕ್ಷಾ ಸಂಹಿತೆ ಕಲಂ 125 (ಎ)** ರ ಪ್ರಕಾರ ಅಪರಾಧವೆಸಗಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ. ಇದಕ್ಕೆ

ನೀವೇನು ಹೇಳುವಿರಿ ?

ಮೇಲೆ ಹೇಳಿದ ಸ್ಥಳ, ದಿನಾಂಕ ಹಾಗೂ ಸಮಯದಂದು 01 ನೇ ಆರೋಪಿತರಾದ ನೀವು ನಿಮ್ಮ ಲಾರಿ ಚಲಾಯಿಸಿಕೊಂಡು ಬಂದು ನಿಮ್ಮ ಎದುರಿನಿಂದ ಬರುತ್ತಿದ್ದ ಆಟೋ ರಿಕ್ಷಾಗೆ ಅಪಘಾತಪಡಿಸಿದ್ದು ಅಲ್ಲದೇ ಅದರಲ್ಲಿ ಪ್ರಯಾಣಿಸುತ್ತಿದ್ದ ಶ್ರೀಮತಿ ರೇಣುಕಾ ಕೋಂ ರವಿ ಹಂಚಿನಮನಿ ಇವರಿಗೆ ತೀವ್ರ ಸ್ವರೂಪದ ಗಾಯಪಡಿಸಿ **ನಾಗರಿಕ ಸುರಕ್ಷಾ ಸಂಹಿತೆ ಕಲಂ 125 (ಬಿ)** ರ ಪ್ರಕಾರ ಅಪರಾಧವೆಸಗಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ. ಇದಕ್ಕೆ ನೀವೇನು ಹೇಳುವಿರಿ ?

ಮೇಲೆ ಹೇಳಿದ ಸ್ಥಳ, ದಿನಾಂಕ ಹಾಗೂ ಸಮಯದಂದು 1 ನೇ ಆರೋಪಿತರಾದ ನೀವು ನಿಮ್ಮ ಲಾರಿ ಚಲಾಯಿಸಿಕೊಂಡು ಬಂದು ನಿಮ್ಮ ಎದುರಿನಿಂದ ಬರುತ್ತಿದ್ದ ಆಟೋ ರಿಕ್ಷಾಗೆ ಅಪಘಾತಪಡಿಸಿದ್ದು ಅಲ್ಲದೇ ಆಟೋ ರಿಕ್ಷಾದ ಚಾಲಕರಾದ ರಮೇಶ ತಂದೆ ದುರಗಪ್ಪ ಹಂಚಿನಮನಿ ಇವರು ಪುಟಿದು ಹೊರಗೆ ಬಿದ್ದಾಗ ಆತನ ತಲೆಯ ಮೇಲೆ ಲಾರಿಯ ಗಾಲಿಯನ್ನು ಹಾಯಿಸಿದ್ದು ಅಲ್ಲದೇ ಆಟೋ ರಿಕ್ಷಾದಲ್ಲಿ ಪ್ರಯಾಣಿಸುತ್ತಿದ್ದ ಶ್ರೀಮತಿ ಮರೆವ್ವ @ ಮರೆಮ್ಮ ಕೋಂ ನಿಂಗಪ್ಪ ಹಂಚಿನಮನಿ , ಪ್ರಣವ ತಂದೆ ರವಿ ಹಂಚಿನಮನಿ ಮತ್ತು ಪೃಥ್ವಿ ತಂದೆ ರವಿ ಹಂಚಿನಮನಿ ಇವರೆಲ್ಲರಿಗೂ ಬಲವಾದ ಗಾಯಪಡಿಸಿ ಮರಣ ಹೊಂದುವಂತೆ ಮಾಡಿ ಆ ಮೂಲಕ ನೀವು **ನಾಗರಿಕ ಸುರಕ್ಷಾ ಸಂಹಿತೆ ಕಲಂ 106 (1)** ರ ಪ್ರಕಾರ ಅಪರಾಧವೆಸಗಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ. ಇದಕ್ಕೆ ನೀವೇನು ಹೇಳುವಿರಿ ?

ಮೇಲೆ ಹೇಳಿದ ಸ್ಥಳ, ದಿನಾಂಕ ಹಾಗೂ ಸಮಯದಂದು 01 ನೇ ಆರೋಪಿತರಾದ ನೀವು ನಿಮ್ಮ ಲಾರಿ ಚಲಾಯಿಸಿಕೊಂಡು ಬಂದು ನಿಮ್ಮ ಎದುರಿನಿಂದ ಬರುತ್ತಿದ್ದ ಆಟೋ ರಿಕ್ಷಾಗೆ ಅಪಘಾತಪಡಿಸಿದ್ದು ಅಲ್ಲದೇ ಅದರಲ್ಲಿ ಪ್ರಯಾಣಿಸುತ್ತಿದ್ದ ಶ್ರೀಮತಿ ರೇಣುಕಾ ಕೋಂ ರವಿ ಹಂಚಿನಮನಿ ಇವರಿಗೆ ಅಪಘಾತಪಡಿಸಿ , ಗಾಯಾಳುವಿಗೆ ಉಪಚಾರಕ್ಕೆ , ಆಸ್ಪತ್ರೆಗೆ

ಸಾಗಿಸದೇ ಹಾಗೇ ಹೋಗಿ **ಭಾರತೀಯ ಮೋಟಾರು ವಾಹನಗಳ ಕಾಯ್ದೆ ಕಲಂ 134(ಎ) ಸಹಕಲಂ 187** ರ ಪ್ರಕಾರ ಅಪರಾಧವೆಸಗಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ. ಇದಕ್ಕೆ ನೀವೇನು ಹೇಳುವಿರಿ ?

ಮೇಲೆ ಹೇಳಿದ ಸ್ಥಳ, ದಿನಾಂಕ ಹಾಗೂ ಸಮಯದಂದು 01 ನೇ ಆರೋಪಿತರಾದ ನೀವು ನಿಮ್ಮ ಲಾರಿ ಚಲಾಯಿಸಿಕೊಂಡು ಬಂದು ನಿಮ್ಮ ಎದುರಿನಿಂದ ಬರುತ್ತಿದ್ದ ಆಟೋ ರಿಕ್ಷಾಗೆ ಅಪಘಾತಪಡಿಸಿದ್ದು ಅಲ್ಲದೇ ಅದರಲ್ಲಿ ಪ್ರಯಾಣಿಸುತ್ತಿದ್ದ ಶ್ರೀಮತಿ ರೇಣುಕಾ ಕೋಂ ರವಿ ಹಂಚಿನಮನಿ ಇವರಿಗೆ ಅಪಘಾತಪಡಿಸಿ ಅಪಘಾತದ ಸಂಗತಿಯನ್ನು ಪೋಲಿಸ ಠಾಣೆಗೆ ತಿಳಿಸದೇ ಹಾಗೇ ಹೋಗಿ **ಭಾರತೀಯ ಮೋಟಾರು ವಾಹನಗಳ ಕಾಯ್ದೆ ಕಲಂ 134(ಬಿ) ಸಹಕಲಂ 187** ರ ಪ್ರಕಾರ ಅಪರಾಧವೆಸಗಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ. ಇದಕ್ಕೆ ನೀವೇನು ಹೇಳುವಿರಿ ?

ಪ್ರಶ್ನೆ **1)** ಈಗ ಓದಿ ಹೇಳಿದ ಆಪಾದನೆಯನ್ನು ಕೇಳಿ ತಿಳಿದುಕೊಂಡಿದ್ದೀರಾ?

ಉತ್ತರಃ

ಪ್ರಶ್ನೆ **2)** ಈಗ ನಿಮಗೆ ಓದಿ ಹೇಳಿದ ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ ?

ಉತ್ತರಃ

ಧಾರವಾಡ                                                  ಸಹಿ/-

ದಿನಾಂಕಃ 23-08-2025                                ಪ್ರ. ಮು. ನ್ಯಾ. ದಂ, ಧಾರವಾಡ